ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

ತ್ರೈಮಾಸಿಕ ಸುದ್ದಿ ಪತ್ರಿಕೆ

ಸಂಪುಟ–5 ಏಪ್ರಿಲ್ ರಿಂದ ಜೂನ್, 2025 ತ್ರೈಮಾಸಿಕ ಪತ್ರಿಕೆ ಸಂಚಿಕೆ–2

## ಕೃಷಿ ಮತ್ತು ಸಂಯೋಜಿತ ಉದ್ಯಮಗಳ ಕುರಿತು ಕೃಷಿ ಮೇಳ ಮತ್ತು ತಾಂತ್ರಿಕ ಅಧಿವೇಶನಗಳು

ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವದ ಪ್ರಯುಕ್ತ, 2025ರ ಏಪ್ರಿಲ್ 9 ಮತ್ತು 10ರಂದು ಗದಗದ ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಎರಡು ದಿನಗಳ ಕೃಷಿ ಮೇಳ ಮತ್ತು ಕೃಷಿ ಹಾಗೂ ಸಂಬಂಧಿತ ಉದ್ಯಮಗಳ ತಾಂತ್ರಿಕ ಅಧಿವೇಶನಗಳನ್ನು ಆಯೋಜಿಸಲಾಯಿತು. "ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೃಷಿ ಮೇಳ – 2025" ಎಂಬ ಹೆಸರಿನಲ್ಲಿ ನಡೆದ ಈ ಕಾರ್ಯಕ್ರಮದ ಉದ್ದೇಶ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಇತ್ತೀಚೆಗೆ ಉಂಟಾದ ಅಭಿವೃದ್ಧಿಗಳನ್ನು ಪ್ರದರ್ಶಿಸುವುದಾಗಿತ್ತು.



ಐಸಿಎಆರ್ – ಕೆ.ಹೆಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಗದಗ ಈ ಕೃಷಿ ಮೇಳದಲ್ಲಿ ಸಕ್ರಿಯವಾಗಿ ಭಾಗವಹಿಸಿ, ನವೀನ ಕೃಷಿ ತಂತ್ರಜ್ಞಾನಗಳು ಮತ್ತು ಉತ್ಕೃಷ್ಟ ಕೃಷಿ ಪದ್ಧತಿಗಳು ವಸ್ತು ಪ್ರದರ್ಶನದಲ್ಲಿ ವಿಶೇಷವಾಗಿದ್ದವು.

ಪ್ರದರ್ಶನದಲ್ಲಿ ಮುಖ್ಯವಾಗಿ ಹಿಂಗಾರು ಜೋಳದ ಉತ್ತಮ ತಳಿಗಳು (SPV 2217, M-35-1, CSB29R), ಕುಸುಬಿ ತಳಿಗಳು (ISF-764, A-2020, DSAF-1 & A-1) ಮತ್ತು ವಿವಿಧ ಸಿರಿಧಾನ್ಯಗಳು, ಜೊತೆಗೆ ಸಿರಿಧಾನ್ಯಗಳ ಬೀಜಗಳು ಮತ್ತು ಸಂಸ್ಕರಿಸಿದ ಸಿರಿಧಾನ್ಯಗಳ ಉತ್ಪನ್ನಗಳು ಪ್ರದರ್ಶಿಸಲ್ಪಟ್ಟವು. ಅಲ್ಲದೆ, ಮೇವಿನ ತಳಿಗಳಾದ ಸೂಪರ್ ನೆಪಿಯರ್, ರೆಡ್ ನೆಪಿಯರ್, ಸ್ಟೈಲೋಸ್ಯಾಂಥಸ್, ಮೇವು ಜೋಳ, ಧಾರವಾಡ ಹೈಬ್ರಿಡ್ ನೆಪಿಯರ್ (DHN-6), ಗಿನಿ ಹುಲ್ಲು ಕೂಡ ಪ್ರದರ್ಶನದಲ್ಲಿ ವಿಶೇಷವಾಗಿದ್ದವು ಒಳಪಟ್ಟಿದ್ದವು. ತೋಟಗಾರಿಕಾ ವಿಭಾಗದಲ್ಲಿ ಗೋಡಂಬಿ, ಈರುಳ್ಳಿ, ಬೆಟ್ಟದ ನೆಲ್ಲಿ, ಮೆಣಸಿನಕಾಯಿ ಇತ್ಯಾದಿ ಬೆಳೆಗಳೊಂದಿಗೆ ನೆಲ್ಲಿಕಾಯಿ ಕ್ಯಾಂಡಿ ಮತ್ತು ಪುಡಿ ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳನ್ನೂ ಪ್ರದರ್ಶಿಸಲಾಯಿತು.

ತಾಂತ್ರಿಕ ಅಧಿವೇಶನದ ಅಧ್ಯಕ್ಷತೆಯನ್ನು ಡಾ. ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿ ಮತ್ತು



ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಗದಗ ಅವರು ವಹಿಸಿದ್ದರು. ಅವರು "ಮೌಲ್ಯವರ್ಧನೆ, ಮಾರುಕಟ್ಟೆ ವ್ಯವಸ್ಥೆ ಹಾಗೂ ರೈತ ಉತ್ಪಾದಕರ ಕಂಪನಿಗಳನ್ನು ಪುನರ್ ಚೇತನಗೊಳಸುವಿಕೆ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಶ್ರೀಮತಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ) ಅವರು ತೋಟಗಾರಿಕಾ ಬೆಳೆಗಳ ತಾಂತ್ರಿಕ ಅಧಿವೇಶನದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ಪ್ರದರ್ಶನದ ವೇಳೆ ರೈತರು ವಿಜ್ಞಾನಿಗಳೊಂದಿಗೆ ಸಂವಾದ ನಡೆಸಿ ತಮ್ಮ ಪ್ರಶ್ನೆಗಳಗೆ ಉತ್ತರ ಪಡೆಯುವ ಮೂಲಕ ತಂತ್ರಜ್ಞಾನಗಳ ಬಗ್ಗೆ ಹೆಚ್ಚು ಮಾಹಿತಿಯನ್ನು ಪಡೆದರು.

## ಮುಂಗಾರು ಪೂರ್ವ ಅಭಿಯಾನ –2025

ಐಸಿಎಆರ್ – ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಗದಗದ ವತಿಯಿಂದ 2025ರ ಏಪ್ರಿಲ್ 22ರಂದು ಗದಗ ತಾಲೂಕಿನ ನಾಗಾವಿ ಗ್ರಾಮದಲ್ಲಿ ಮತ್ತು ಏಪ್ರಿಲ್ 25ರಂದು ಮುಂಡರಗಿ ತಾಲೂಕಿನ ಚುರ್ಚಿಹಾಳ ಗ್ರಾಮದಲ್ಲಿ ಹೊರ ಆವರಣ ಪೂರ್ವ ಮುಂಗಾರು ಅಭಿಯಾನ ಆಯೋಜಿಸಲಾಯಿತು. ಈ ಅಭಿಯಾನದ ಮುಖ್ಯ ಉದ್ದೇಶ– "ಪೂರ್ವ ಮುಂಗಾರು ತಯಾರಿ, ಮಣ್ಣು ಪರೀಕ್ಷಾ ತಂತ್ರಜ್ಞಾನಗಳು ಮತ್ತು ಬೀಜೋಪಚಾರ" ಕುರಿತು ರೈತರಿಗೆ ಮಾಹಿತಿ ನೀಡಿದರು.



ತರಬೇತಿ ಕಾರ್ಯಕ್ರಮದಲ್ಲಿ ಶ್ರೀ ಎನ್.ಎಚ್.ಭಂಡಿ, ತಜ್ಞರು (ಮಣ್ಣು ವಿಜ್ಞಾನ), ಇವರು ಮಣ್ಣು ಪರೀಕ್ಷೆಯ ಮಹತ್ವವನ್ನು ವಿವರಿಸಿದರು ಮತ್ತು ಮಣ್ಣು ಮಾದರಿಗಳನ್ನು ಸಂಗ್ರಹಿಸುವ ವಿಧಾನವನ್ನು ತೋರಿಸಿ, ಮಣ್ಣು ಪರೀಕ್ಷೆಯಿಂದ ಸರಿಯಾದ ಪೋಷಕಾಂಶ ಶಿಫಾರಸು ಸಾಧ್ಯವಾಗುವುದರಿಂದ ಸಮತೋಲನ ಗೊಬ್ಬರ ಬಳಕೆಯು ಫಲವತ್ತತೆ ಹೆಚ್ಚಿಸಲು ಹೇಗೆ ಸಹಕಾರಿಯಾಗುತ್ತದೆ ಎಂಬುದನ್ನು ವಿವರಿಸಿದರು.



ಜೊತೆಗೆ ಬೀಜೋಪಚಾರ ಪ್ರಾಮುಖ್ಯತೆಯನ್ನು ವಿವರಿಸುತ್ತಾ, ಬೀಜ ಮತ್ತು ಮಣ್ಣು ಮೂಲದ ರೋಗಗಳನ್ನು ತಡೆಯಲು ಮತ್ತು ಮೊಳಕೆ ಪ್ರಮಾಣ ಹೆಚ್ಚಿಸಲು ಇದರ ಉಪಯೋಗವನ್ನು ವಿವರಿಸಿದರು. ಅವರು ಹೆಸರುಕಾಳು ಬಿತ್ತನೆಗೆ ಬೀಜೋಪಚಾರ ಮಾಡುವ ವಿಧಾನವನ್ನು ರೈತರೊಂದಿಗೆ ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿದರು,

ಶ್ರೀಮತಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ), ಈರುಳ್ಳಿ ಮತ್ತು ಮೆಣಸಿನಕಾಯಿ ಬೆಳೆಗಳಲ್ಲಿ ಸಮಗ್ರ ಬೇಸಾಯ ಕ್ರಮಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು.

ಡಾ. ವಿನಾಯಕ ಎಚ್. ನಿರಂಜನ, ವಿಷಯ ತಜ್ಞರು (ಕೃಷಿ ಇಂಜಿನಿಯರಿಂಗ್), ಯಾಂತ್ರೀಕೃತ ಭೂಮಿಯ ತಯಾರಿಕೆಯ ಕುರಿತು ಮಾಹಿತಿ ನೀಡಿದರು. ಆಧುನಿಕ ಕೃಷಿ ಯಂತ್ರೋಪಕರಣಗಳ

ಉಪಯೋಗದಿಂದ ಭೂಮಿಯ ತಯಾರಿ, ತೇವಾಂಶ ಸಂರಕ್ಷಣೆ ಮತ್ತು ಉತ್ತಮ ಬೆಳೆಗೆ ಹೇಗೆ ಸಹಕಾರಿ ಎಂಬುದರ ಕುರಿತು ವಿವರಿಸಿದರು.

ಡಾ. ಕೆ. ವಿ. ಪಾಟೀಲ, ವಿಷಯ ತಜ್ಞರು (ಕೃಷಿ ವಿಸ್ತರಣ), ತರಬೇತಿ ಕಾರ್ಯಕ್ರಮವನ್ನು ಸಂಯೋಜಿಸಿ, ಪೂರ್ವ ಮುಂಗಾರು  ಅಭಿಯಾನದ ಪರಿಚಯ ಭಾಷಣ ನೀಡಿದರು.

ಈ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ರೈತರು, ಕೃಷಿ ಮಹಿಳೆಯರು ಮತ್ತು ಗ್ರಾಮೀಣ ಯುವಕರು ಭಾಗವಹಿಸಿ, ಮುಂಬರುವ ಮುಂಗಾರು ಹಂಗಾಮಿನಲ್ಲಿ ಮಣ್ಣು ಪರೀಕ್ಷೆ ಮತ್ತು ಬೀಜೋಪಚಾರ ಅನುಸರಣೆಗೆ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದರು.

## ಬೇಸಿಗೆ ಶೇಂಗಾ ಬೆಳೆಯಲ್ಲಿ ಸ ಕ್ಷೇತ್ರೋತ್ಸವ ಮತ್ತು ಶೇಂಗಾ ಬಳ್ಳಿ ಕೀಳುವ ಯಂತ್ರದ ಪ್ರಾತ್ಯಕ್ಷಿಕೆ

2025ರ ಏಪ್ರಿಲ್ 7 ರಂದು ಗದಗ ತಾಲೂಕು ನಾಗಾವಿ ಗ್ರಾಮದಲ್ಲಿ ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ (ಹಿಂಗಾರು/ಬೇಸಿಗೆ) ಯೋಜನೆಯಡಿ ಬೇಸಿಗೆ ಶೇಂಗಾ ಬೆಳೆಗೆ ಸಂಬಂಧಿಸಿದ ಕ್ಷೇತ್ರೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರು ಸೌ. ಮೇಘನಾ ನಾಡಿಗೇರ್ ಅವರು ಮಾತನಾಡುತ್ತಾ, ಶೇಂಗಾ ಬೆಳೆಯು ನೀರಾವರಿ ಸೌಲಭ್ಯವಿರುವ ಪ್ರದೇಶದಲ್ಲಿ ಲಾಭದಾಯಕವಾದ ಬೆಳೆ ಆಗಿದ್ದು, ವೈಜ್ಞಾನಿಕ ವಿಧಾನದಲ್ಲಿ ಬೆಳೆಯುವುದರಿಂದ ಉತ್ತಮ ಫಲತಾಂಶ ಲಭ್ಯವಾಗುತ್ತದೆ ಎಂದು ತಿಳಿಸಿದರು. ಕೃಷಿ ಇಲಾಖೆಯಿಂದ ವಿವಿಧ ಬೆಳೆಗಳಿಗೆ ಲಭ್ಯವಿರುವ ಯೋಜನೆಗಳ ಕುರಿತು ಮಾಹಿತಿಯನ್ನೂ ನೀಡಿದರು.



ಶ್ರೀ ಎಸ್.ಕೆ.ಮುದ್ಲಾಪುರ, ನಿವೃತ್ತ ವಿಜ್ಞಾನಿ (ಸಸ್ಯ ಸಂರಕ್ಷಣೆ), ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಬೇಸಿಗೆ ಶೇಂಗಾ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣಾ ವಿಧಾನ ಕುರಿತು ವಿವರವಾದ ಉಪನ್ಯಾಸ ನೀಡಿದರು.

ಡಾ. ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಗದಗ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯಡಿಯಲ್ಲಿ NFSM ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು. ಕೃಷಿ ವಿಜ್ಞಾನ ಕೇಂದ್ರ ನೀಡಿದ ತಾಂತ್ರಿಕ ಸಲಹೆಗಳನ್ನು ಯಶಸ್ವಿಯಾಗಿ ಅಳವಡಿಸಿದ ರೈತರ ಪ್ರಯತ್ನವನ್ನು ಅವರು ಶ್ಲಾಘಿಸಿದರು.



ಶ್ರೀ ಎನ್.ಹೆಚ್. ಭಂಡಿ, ವಿಜ್ಞಾನಿ (ಮಣ್ಣಿನ ವಿಜ್ಞಾನ), ಅವರು ಮಣ್ಣಿನ ಆರೋಗ್ಯ ನಿರ್ವಹಣೆ ಮತ್ತು ಸೂಕ್ಷ್ಮ ಪೋಷಕಾಂಶಗಳ ಪ್ರಾಮುಖ್ಯತೆ ಕುರಿತು ಮಾಹಿತಿ ನೀಡಿದರು.

ಡಾ. ವಿನಾಯಕ ಎಚ್. ನಿರಂಜನ್, ವಿಜ್ಞಾನಿ (ಕೃಷಿ ಇಂಜಿನಿಯರಿಂಗ್), ಅವರು ವಿವಿಧ ಕ್ಷೇತ್ರ ಬೆಳೆಗಳಲ್ಲಿ ಯಾಂತ್ರಿಕತೆಯ ಬಳಕೆಯಿಂದ ಕೃಷಿ ವೆಚ್ಚ ಕಡಿಮೆ ಮಾಡುವ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ಟ್ರಾಕ್ಟರ್ ಮೂಲಕ ಕಾರ್ಯನಿರ್ವಹಿಸುವ ಕಡಲೆ ಕಟಾವು ಯಂತ್ರ ಹಾಗೂ ಎಲಿವೇಟರ್ ಅನ್ನು ಶ್ರೀ ಮಲ್ಲಪ್ಪ ಫಕೀರಪ್ಪ ಗೊಳಪ್ಪನವರ್ ಅವರ ಹೊಲದಲ್ಲಿ ಪ್ರಾತ್ಯಕ್ಷಿಕೆಯಾಗಿ ತೋರಿಸಲಾಯಿತು. ನಂತರ, ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ ಕ್ಷೇತ್ರಕ್ಕೆ ನಾವಗಿ ಗ್ರಾಮದ ರೈತರಿಗೆ ಪ್ರವಾಸವನ್ನು ಆಯೋಜಿಸಲಾಯಿತು.

## ನವೀನ ಎಲೆಕ್ಟ್ರೋ ಮೆಕಾನಿಕಲ್ ಬಿತ್ತನೆ ಕೂರಗಿಯ ಪದ್ಧತಿ ಪ್ರಾತ್ಯಕ್ಷಿಕೆ

ಪುನೆಯ "AgAutomate" ಸ್ಟಾರ್ಟ್-ಅಪ್ ಸಂಸ್ಥೆಯು ಅಭಿವೃದ್ಧಿಪಡಿಸಿದ ನವೀನ ಎಲೆಕ್ಟ್ರೋ ಮೆಕಾನಿಕಲ್ ಬಿತ್ತನೆ ಕೂರಗಿಯ ಪದ್ಧತಿ ಪ್ರಾತ್ಯಕ್ಷಿಕೆ ಮತ್ತು ಕ್ಷೇತ್ರ ಪರೀಕ್ಷೆ ಕಾರ್ಯಕ್ರಮವನ್ನು ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ಗದಗದಲ್ಲಿ ನೆಟಾಫಿಮ್ ಇರಿಗೇಶನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅವರ ಸಹಯೋಗದಲ್ಲಿ ಆಯೋಜಿಸಲಾಯಿತು.



ಗ್ರಾಮಗಳ ರೈತರು ಈ ಪ್ರದರ್ಶನದಲ್ಲಿ ಭಾಗವಹಿಸಿ, ಮೂಲಮಾದರಿ ಯಂತ್ರವನ್ನು ವ್ಯಾಪಾರಿಕ ಘಟಕವಾಗಿ ಅಭಿವೃದ್ಧಿಪಡಿಸುವ ಉದ್ದೇಶಕ್ಕೆ ಅಮೂಲ್ಯ ಸಲಹೆಗಳನ್ನು ನೀಡಿದರು.

## ರುರಲ್ ಇಮ್ಮರ್ಷನ್ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳುವುದು

ಡಾ. ವಿನಾಯಕ ನಿರಂಜನ್, ವಿಷಯ ತಜ್ಞರು (ಕೃಷಿ ಇಂಜಿನಿಯರಿಂಗ್) ಮತ್ತು ಡಾ. ಕೆ.ವಿ. ಪಾಟೀಲ, ವಿಷಯ ತಜ್ಞರು (ಕೃಷಿ ವಿಸ್ತರಣೆ), ಕೃಷಿ ವಿಜ್ಞಾನ ಕೇಂದ್ರ ಹುಲಕೋಟಿ ಇವರುಗಳು 2025ರ ಮೇ 6 ರಂದು ಶಿರಹಟ್ಟಿ ತಾಲೂಕಿನ ಮಾಗಡಿ ಗ್ರಾಮದಲ್ಲಿ ಆಯೋಜಿಸಲಾದ ರುರಲ್ ಇಮ್ಮರ್ಷನ್ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. ಈ ಕಾರ್ಯಕ್ರಮವನ್ನು ಮಹಾತ್ಮಾ ಗಾಂಧಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ವತಿಯಿಂದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಗ್ರಾಮೀಣ ಅನುಭವ ನೀಡುವ ಉದ್ದೇಶದಿಂದ ಆಯೋಜಿಸಲಾಗಿತ್ತು.



ಈ ಕಾರ್ಯಕ್ರಮದ ಉದ್ದೇಶ, ವಿದ್ಯಾರ್ಥಿಗಳಿಗೆ ಗ್ರಾಮೀಣ ಜೀವನದ ನೈಜ ಪರಿಸರ ಹಾಗೂ ಅನ್ವಯ ತರಬೇತಿಯನ್ನು ನೀಡುವುದು ಮತ್ತು ಗ್ರಾಮೀಣ ಸಮುದಾಯದೊಂದಿಗೆ ನೇರ ಸಂವಾದದ ಮೂಲಕ ನೈಪುಣ್ಯತೆ ಬೆಳೆಸುವುದಾಗಿತ್ತು.

ಡಾ. ವಿನಾಯಕ ನಿರಂಜನ್ ಅವರು ಕೃಷಿಯಲ್ಲಿ ಯಾಂತ್ರೀಕರಣದ ಅಗತ್ಯತೆ ಕುರಿತು ಮಾತನಾಡಿದರು. ಅವರು ಶ್ರಮ ಕಡಿಮೆಮಾಡುವ ಕ್ರಮಗಳು, ಕಾರ್ಯಕ್ಷಮತೆ ಹೆಚ್ಚಿಸುವುದು ಮತ್ತು ಉತ್ಪಾದಕತೆಯಲ್ಲಿ ಅಭಿವೃದ್ಧಿ ಸಾಧಿಸಲು ರೈತರು ಯಂತ್ರೋಪಕರಣಗಳನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಡಾ. ಕೆ.ವಿ. ಪಾಟೀಲ ಅವರು ಮಣ್ಣಿನ ಆರೋಗ್ಯ ನಿರ್ವಹಣೆ ಕುರಿತು ಮಾತನಾಡಿದರು. ಅವರು ಸುಸ್ಥಿರ ಕೃಷಿಗಾಗಿ ಮಿತವಾಗಿ ಪರಿಕರಗಳ ಬಳಕೆ, ಸಮತೋಲಿತ ಗೊಬ್ಬರಗಳ ಬಳಕೆ, ಮಣ್ಣಿನ ಪರೀಕ್ಷೆಯ ಮಹತ್ವ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಅಗತ್ಯತೆ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ MGRDPR ವಿಶ್ವವಿದ್ಯಾಲಯದ ಕುಲಪತಿ ಡಾ. ಸುರೇಶ್ ವಿ. ನಾಡಗೌಡರ ಅವರು ಭಾಗವಹಿಸಿ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಪ್ರೇರೇಪಿಸಿದರು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ರೈತರು ಮತ್ತು ಗ್ರಾಮಸ್ಥರು ಸಕ್ರಿಯವಾಗಿ ಭಾಗವಹಿಸಿದರು.

## ಗೋಡಂಬಿ ಬೆಳೆಯುವ ರೈತರು ಮತ್ತು ಖರೀದಿದಾರರ ಸಭೆ



2025ರ ಮೇ 14ರಂದು ಕೃಷಿ ವಿಜ್ಞಾನ ಕೇಂದ್ರ, ಗದಗ ಇವರ ವತಿಯಿಂದ ಗೋಡಂಬಿ ಬೆಳೆದ ರೈತರು ಮತ್ತು ಕಚ್ಚಾ ಗೋಡಂಬಿ ಬೀಜದ ಖರೀದಿದಾರರ ನಡುವೆ ಸಭೆ ಆಯೋಜಿಸಲಾಯಿತು. ಚಿಕ್ಕೋಡಿಯ ಮಹಾಲಕ್ಷ್ಮಿ ಗೋಡಂಬಿ ಪ್ರೊಸೆಸಿಂಗ್ ಇಂಡಸ್ಟ್ರೀಸ್ ಖರೀದಿದಾರರು ಈ ಸಭೆಯಲ್ಲಿ ಭಾಗವಹಿಸಿದರು. ಖರೀದಿದಾರರು ಬೀಜದ ತೇವಾಂಶ ಪ್ರಮಾಣ ಮತ್ತು ಗಾತ್ರದ ಮೌಲ್ಯ ಮಾಪನಗಳ ಆಧಾರದಲ್ಲಿ ಬೆಲೆ ನಿಗದಿಪಡಿಸಿದರು.

ಈ ಸಭೆಯಲ್ಲಿ ರೈತರು ತಮ್ಮ ಬಳಿ 38 ಟನ್ ಕಚ್ಚಾ ಗೋಡಂಬಿ ಬೀಜ ಮಾರಾಟಕ್ಕಾಗಿ ಲಭ್ಯವಿದೆ ಎಂದು ತಿಳಿಸಿದರು. 25ಕ್ಕೂ ಹೆಚ್ಚು ಗೂಡಂಬಿ ಬೆಳೆದ ರೈತರು ಸಭೆಯಲ್ಲಿ ಭಾಗವಹಿಸಿ ಗೂಡಂಬಿ ಬೀಜದ ಗುಣಮಟ್ಟದ ಅಂಶಗಳ ಕುರಿತು ತಿಳಿದುಕೊಳ್ಳುವ ಅವಕಾಶವನ್ನು ಪಡೆದರು.

## ಸಮಗ್ರ ಪೋಷಕಾಂಶಗಳ ನಿರ್ವಹಣೆಯಲ್ಲಿ ಸರ್ಟಿಫಿಕೇಟ್ ಕೋರ್ಸಿನ ಪ್ರಮಾಣಪತ್ರ ವಿತರಣಾ ಸಮಾರಂಭ



2025ರ ಮೇ 21ರಂದು, ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ಗದಗ ಇವರುಗಳ ವತಿಯಿಂದ ಸಮಗ್ರ ಪೋಷಕಾಂಶಗಳ ನಿರ್ವಹಣಾ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ತರಬೇತಿ ಪಡೆದವರಿಗೆ ಪ್ರಮಾಣಪತ್ರ ವಿತರಣಾ ಸಮಾರಂಭವನ್ನು ಆಯೋಜಿಸಲಾಯಿತು. ಶ್ರೀ ಎನ್.ಹೆಚ್. ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ), ಅವರು ಉದ್ಘಾಟನಾ ಭಾಷಣದಲ್ಲಿ ಮಾತನಾಡುತ್ತಾ, DAESI ಕೋರ್ಸ್ ಪೂರೈಸಿದ ಕೃಷಿ ಪರಿಕರ ಮಾರಾಟಗಾರರು ಕೃಷಿ ವಿಜ್ಞಾನ ಕೇಂದ್ರದೊಂದಿಗೆ ಕೈಜೋಡಿಸಿ ಕೃಷಿ ತಂತ್ರಜ್ಞಾನಗಳ ವಿಸ್ತರಣೆಗೆ ಸಹಕಾರ ನೀಡಬೇಕು ಎಂದು ಅಭಿಪ್ರಾಯಪಟ್ಟರು. CCINM ಕೋರ್ಸ್‌ನ ಉದ್ದೇಶ ಗೊಬ್ಬರ ವ್ಯಾಪಾರಿಗಳಿಗೆ ಸಮತೋಲನ ಗೊಬ್ಬರ ಬಳಕೆಯ ತಾಂತ್ರಿಕ ಜ್ಞಾನವನ್ನು ನೀಡುವುದು ಹಾಗೂ ಮಣ್ಣಿನ ಆರೋಗ್ಯವನ್ನು ಕಾಪಾಡುವುದು ಎಂದು ವಿವರಿಸಿದರು.

ಶ್ರೀ ಎಸ್.ಕೆ. ಮುದ್ಲಾಪುರ, DAESI ಫೆಸಿಲಿಟೇಟರ್, ಅವರು ಪರಿಚಯ ಭಾಷಣದಲ್ಲಿ CCINM ತರಬೇತಿಗಳ ಮಹತ್ವವನ್ನು ಬಿಂಬಿಸಿದರು ಮತ್ತು ಕೃಷಿ ಪರಿಕರ ಮಾರಾಟಗಾರರು ರೈತರಿಗೆ ನಿಸ್ವಾರ್ಥ ಸೇವೆ ನೀಡಿ, ಕೃಷಿಯಲ್ಲಿನ ಪುನರಾವೃತ ಸಮಸ್ಯೆಗಳನ್ನು ಪರಿಹರಿಸಲು ನೆರವಾಗಬೇಕು ಎಂದು ಸಲಹೆ ನೀಡಿದರು.

ಶ್ರೀಮತಿ ಸ್ಫೂರ್ತಿ ಜಿ.ಎಸ್., ಉಪನಿರ್ದೇಶಕರು, ಕೃಷಿ ಇಲಾಖೆ, ಗದಗ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಕೃಷಿ ಇಲಾಖೆಯೊಂದಿಗೆ ಸಹಕರಿಸಿ ರೈತರಿಗೆ ಲಭ್ಯವಿರುವ ಉಪಯುಕ್ತ ಯೋಜನೆಗಳನ್ನು ವಿಸ್ತರಿಸಬೇಕೆಂದು ಕರೆ ನೀಡಿದರು.

ಡಾ. ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು,ಅಧ್ಯಕ್ಷೀಯ ಭಾಷಣದಲ್ಲಿ CCINM ತರಬೇತಿದಾರರಿಗೆ ಕೋರ್ಸ್ ಯಶಸ್ವಿಯಾಗಿ ಪೂರೈಸಿದಕ್ಕಾಗಿ ಅಭಿನಂದನೆಗಳು ತಿಳಿಸಿ, ಅವರು ರೈತ ಸಮುದಾಯದ ಪ್ರಗತಿಗಾಗಿ ನಿರಂತರವಾಗಿ ಶ್ರಮಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ 40 ಮಂದಿ CCINM ತರಬೇತಿದಾರರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

## ಕೃಷಿ ಇಲಾಖೆಯ ದ್ವೈಮಾಸಿಕ ಸಭೆ



2025ರ ಮೇ 27 ರಂದು, ಐ.ಸಿ.ಎ.ಆರ್. – ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಕೃಷಿ ಇಲಾಖೆಯ ಸಹಯೋಗದಲ್ಲಿ ದ್ವೈಮಾಸಿಕ ಸಭೆ ನಡೆಯಿತು. ಈ ಸಭೆಯು ಜಿಲ್ಲೆಯ ಮುಂಗಾರು ಹಂಗಾಮಿನ ಬೆಳೆ ಉತ್ಪಾದನೆಗೆ ಸಂಬಂಧಿಸಿದ ಯೋಜನೆ ಮತ್ತು ತಯಾರಿ ಕುರಿತು ಚರ್ಚೆ ನಡೆಸಲು ಕರೆಯಲಾಗಿತ್ತು.

ಈ ಸಭೆಗೆ ಶ್ರೀಮತಿ ತಾರಾಮಣಿ ಜಿ.ಎಚ್. ಜಂಟಿ ಕೃಷಿ ನಿರ್ದೇಶಕರು, ಗದಗ ಅಧ್ಯಕ್ಷತೆ ವಹಿಸಿದ್ದರು. ಜೊತೆಗೆ ಶ್ರೀ ಬಿ.ಆರ್.ಪಾಲಾಕ್ಷಿಗೌಡ, ಉಪನಿರ್ದೇಶಕರು, ಕೃಷಿ ಇಲಾಖೆ, ರೋಣ, ಡಾ. ಬಿ.ಎನ್.ಮೊಟಗಿ, ವಿಜ್ಞಾನಿ (ತಳಿ ಅಭಿವೃದ್ಧಿ), ಕೃಷಿ ಸಂಶೋಧನಾ ಕೇಂದ್ರ, ಅಣ್ಣಿಗೇರಿ, ಡಾ. ಮಿಲಿಂದ ಪಿ. ಪೊದ್ದಾರ, ವಿಜ್ಞಾನಿ (ಬೇಸಾಯಶಾಸ್ತ್ರ), ಡಾ. ಶಿವಲಿಂಗ ಹೊಟ್ಕರ್, ವಿಜ್ಞಾನಿ (ಸಸ್ಯ ರೋಗಶಾಸ್ತ್ರ), ಕೃಷಿ ಸಂಶೋಧನಾ ಕೇಂದ್ರ, ಅಣ್ಣಿಗೇರಿ, ಡಾ. ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ

ಸಭೆಯಲ್ಲಿ ಮುಂಗಾರು ಹಂಗಾಮಿನ ಕೃಷಿಗೆ ಸಂಬಂಧಿಸಿದ ಹಲವಾರು ಪ್ರಮುಖ ವಿಷಯಗಳ ಕುರಿತು ವಿಸ್ತೃತ ಚರ್ಚೆಗಳು ನಡೆದವು. ಪ್ರಮುಖವಾಗಿ

- ಗುಣಮಟ್ಟದ ಬೀಜಗಳು ಮತ್ತು ಗೊಬ್ಬರದ ಸಮಯೋಚಿತ ಲಭ್ಯತೆ
- ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣಾ ಕ್ರಮಗಳು
- ಹವಾಮಾನ ನಿರೋಧಕ ಬೆಳೆಯ ಮತ್ತು ತಂತ್ರಜ್ಞಾನಗಳ ಉತ್ತೇಜನ
- ಮುಂಚೂಣಿ ಪ್ರಾತ್ಯಕ್ಷಿಕೆಗಳು ಮತ್ತು ಕ್ಷೇತ್ರ ಪರೀಕ್ಷೆಗಳ ಮೂಲಕ ರೈತರನ್ನು ತಲುಪುವುದು
- ಸಂಶೋಧನಾ ಸಂಸ್ಥೆಗಳು ಮತ್ತು ಕೃಷಿ ಇಲಾಖೆಯ ವಿಸ್ತರಣಾ ಸಿಬ್ಬಂದಿಗಳ ನಡುವಿ.

ಡಾ. ಸುಧಾ ವಿ. ಮಂಕಣಿ ಅವರು ಮುಂಗಾರು ಹಂಗಾಮಿಗಾಗಿ ಕೃಷಿ ವಿಜ್ಞಾನ ಕೇಂದ್ರವು ಯೋಜಿಸಿರುವ ವಿಸ್ತರಣಾ ಚಟುವಟಿಕೆಗಳಾದ ತರಬೇತಿ ಕಾರ್ಯಕ್ರಮಗಳು, ಪ್ರಾತ್ಯಕ್ಷಿಕೆಗಳು ಮತ್ತು ಜಾಗೃತಿ ಅಭಿಯಾನಗಳ ಕುರಿತು ವಿವರಿಸಿದರು. ಡಾ. ಬಿ.ಎನ್.ಮೊಟಗಿ ಅವರು ಸ್ಥಳೀಯ ಪರಿಸ್ಥಿತಿಗೆ ಹೊಂದುವ ಸುಧಾರಿತ

ವೈವಿಧ್ಯಗಳನ್ನು ಉತ್ತೇಜಿಸುವ ಅಗತ್ಯತೆಯ ಬಗ್ಗೆ ಮಾತನಾಡಿದರು. ಡಾ. ಮಿಲಿಂದ ಪೊದ್ದಾರ ಅವರು ಕೃಷಿ ಉತ್ಪಾದಕತೆ ಹೆಚ್ಚಿಸಲು ಬೇಸಾಯ ಕ್ರಮಗಳ ಶಿಫಾರಸುಗಳ ಕುರಿತು ಮಾಹಿತಿ ನೀಡಿದರು. ಡಾ. ಶಿವಲಿಂಗ ಹೊಟ್ಕರ್ ಅವರು ರೋಗಗಳ ಮೇಲ್ವಿಚಾರಣೆ ಮತ್ತು ನಿರ್ವಹಣಾ ಕ್ರಮಗಳ ಕುರಿತು ಒಳನೋಟ ನೀಡಿದರು.

ಸಭೆಯ ಕೊನೆಯಲ್ಲಿ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಶೋಧನಾ ಕೇಂದ್ರ ಮತ್ತು ಕೃಷಿ ಇಲಾಖೆ ಪರಸ್ಪರ ಸಹಕರಿಸುತ್ತಾ ರೈತರಿಗೆ ಸಮಯೋಚಿತ ಹಾಗೂ ಪರಿಣಾಮಕಾರಿಯಾಗಿ ಮಾಹಿತಿ ನೀಡಲು ತಿಳಿಸಲಾಯಿತು.

## ರಾಷ್ಟ್ರಮಟ್ಟದ ಕಾರ್ಯಾಗಾರದಲ್ಲಿ ಕೇಂದ್ರದ ತಜ್ಞರಾಗಿ ವಿಜ್ಞಾನಿಗಳು ಭಾಗವಹಿಸಿದ್ದು



ಸಂಸ್ಥೆಯ ಕೃಷಿ ವಿಸ್ತರಣೆ ನೀತಿ ಕೇಂದ್ರ (Centre for Agricultural Extension Policy) ಇವರುಗಳ ವತಿಯಿಂದ "DAESI ಕೋರ್ಸ್‌ಗಾಗಿ ಅಧ್ಯಯನ ಸಾಮಗ್ರಿಯ ಪರಿಷ್ಕರಣೆ ಹಾಗೂ ಪ್ರಶ್ನಾ ಬ್ಯಾಂಕ್ ಸಿದ್ಧತೆ" ಕುರಿತು ಎರಡು ದಿನಗಳ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಈ ಕಾರ್ಯಾಗಾರದಲ್ಲಿ ಡಾ. ವಿನಾಯಕ ಎಚ್. ನಿರಂಜನ್, ವಿಷಯ ತಜ್ಞರು (ಕೃಷಿ ಇಂಜಿನಿಯರಿಂಗ್) ಭಾಗವಹಿಸಿ ಕೃಷಿ ಯಾಂತ್ರಿಕತೆಯ ವಿಷಯದ ಕುರಿತಂತೆ ಚರ್ಚೆಗಳಲ್ಲಿ ಪಾಲ್ಗೊಂಡರು.

ಕಾರ್ಯಾಗಾರವನ್ನು ಡಾ. ಸಾಗರ್ ಹನುಮಾನ್ ಸಿಂಗ್ (DG (I/c), MANAGE), ಅವರು ಉದ್ಘಾಟಿಸಿ DAESI ಕೋರ್ಸ್‌ನ ಅಧ್ಯಯನ ಸಾಮಗ್ರಿಯನ್ನು ಪ್ರಾದೇಶಿಕ ಅಗತ್ಯಗಳಿಗೆ ಅನುಗುಣವಾಗಿ ಪರಿಷ್ಕರಿಸುವ ಹಾಗೂ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಇತ್ತೀಚಿನ ತಂತ್ರಜ್ಞಾನಗಳನ್ನು ಅಳವಡಿಸುವ ಅಗತ್ಯತೆಯನ್ನು ಹೈಲೈಟ್ ಮಾಡಿದರು.

ಡಾ. ಎಂ. ಶ್ರೀಕಾಂತ್, ನಿರ್ದೇಶಕರು (ABM) ಮತ್ತು ಮುಖ್ಯ ಸಂಯೋಜಕರು (DAESI) ಅವರು ಕಾರ್ಯಾಗಾರದ ಸಂಯೋಜಕರಾಗಿದ್ದರು.

## ವಿಕಸಿತ ಕೃಷಿ ಸಂಕಲ್ಪ ಅಭಿಯಾನ– ಗದಗ ಜಿಲ್ಲೆಯಲ್ಲಿ ಅದ್ವಿತೀಯ ಯಶಸ್ಸು

ಶ್ರೀ ಶಿವರಾಜ್ ಸಿಂಗ್ ಚೌಹಾಣ್, ಕೃಷಿ ಮತ್ತು ರೈತ ಕಲ್ಯಾಣ ಸಚಿವರು ಹಾಗೂ ATARI ವಲಯ 11ರ ಮಾರ್ಗದರ್ಶನದಲ್ಲಿ, ರಾಷ್ಟ್ರಮಟ್ಟದ ಮುಂಗಾರು ಪೂರ್ವ ಅಭಿಯಾನವಾದ ವಿಕಸಿತ ಕೃಷಿ ಸಂಕಲ್ಪ ಅಭಿಯಾನವನ್ನು ಗದಗ ಜಿಲ್ಲೆಯಲ್ಲಿ 2025ರ ಮೇ 29ರಿಂದ ಜೂನ್ 12ರವರೆಗೆ ಯಶಸ್ವಿಯಾಗಿ ನಡೆಸಲಾಯಿತು. ಹುಲಕೋಟಿಯ ಕೃಷಿ ವಿಜ್ಞಾನ ಕೇಂದ್ರದ ಸಂಯೋಜನೆಯಲ್ಲಿ, ಈ ಅಭಿಯಾನವು ವೈಜ್ಞಾನಿಕ ನವೀನತೆಗಳನ್ನು ಕೃಷಿ ಪದ್ಧತಿಗಳೊಂದಿಗೆ ಸೇರ್ಪಡೆಗೊಳಿಸುವ ಉದ್ದೇಶದಿಂದ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಕಾರ್ಯಗತಗೊಂಡಿತು.

ಪ್ರಮುಖ ವಿಷಯಗಳು:

ಮಣ್ಣಿನ ಆರೋಗ್ಯ, ಸಮಗ್ರ ಬೆಳೆ ಹಾಗೂ ತೋಟಗಾರಿಕೆ ನಿರ್ವಹಣೆ, ಕೃಷಿಯಲ್ಲಿ ಯಾಂತ್ರೀಕರಣ, ಡಿಜಿಟಲ್ ಕೃಷಿ, ಮಹಿಳಾ ಸಬಲೀಕರಣ ಕುರಿತು ಮಾಹಿತಿಯನ್ನು ವರ್ಗಾವಣೆ,

ಅಭಿಯಾನದಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳು :

- 64 ಬೀಜೋಪಚಾರ ಪ್ರದರ್ಶನಗಳು
- 22 ಮಣ್ಣು ಮಾದರಿ ಸಂಗ್ರಹಣೆ ಪ್ರದರ್ಶನಗಳು
- 2 ಕಿಸಾನ್ ಡ್ರೋನ್ ಪ್ರದರ್ಶನಗಳು
- 17 ರೈತರ ಅನ್ವೇಶಣೆಗಳನ್ನು ದಾಖಲಿಸುವುದು
- 26 ಪತ್ರಿಕಾ ಲೇಖನಗಳು, 27 ರೇಡಿಯೋ ಕಾರ್ಯಕ್ರಮಗಳು & 125 ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು
- ಅಭಿವೃದ್ಧಿ ಇಲಾಖೆಗಳು, ಸ್ವ-ಸಹಾಯ ಗುಂಪುಗಳು, ಕೃಷಿ ಉತ್ಪಾದನಾ ಸಂಸ್ಥೆಗಳು, ಕೃಷಿ ಸಹೋದರಿಯರು ಹಾಗೂ ಸ್ಥಳೀಯ ಹಿತಾಸಕ್ತರ ಸಕ್ರಿಯವಾಗಿ ಭಾಗವಹಿಸಿದರು.

ಒಟ್ಟಾರೆಯಗಿ ಈ ಅಭಿಯಾನದ ಕುರಿತು ರೈತರು ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು, ಮುಂದಿನ ದಿನಗಳಲ್ಲಿ ಅದನ್ನು ಇನ್ನೂ ಶೀಘ್ರದಲ್ಲಿ ಆಯೋಜಿಸುವಂತೆ ಸಲಹೆ ನೀಡಿದರು. ಬೆಳೆ ಪ್ರತಿರೋಧ, ಕೀಟ ಹಾಗೂ ರೋಗ ನಿರ್ವಹಣೆ, ಯಾಂತ್ರೀಕರಣದ ಕೊರತೆ, ಪಶು ಉತ್ಪಾದಕತೆ ಮುಂತಾದ ಸಂಶೋಧನಾತ್ಮಕ ವಿಚಾರಗಳು ಈ ಅಭಿಯಾನ ಬೆಳಕಿಗೆ ತಂದಿತು.

ಈ ಅಭಿಯಾನವು ಕೃಷಿ ತಂತ್ರಜ್ಞಾನ ಆಧಾರಿತ ಮತ್ತು ಪರಿಣಾಮಕಾರಿ ಕೃಷಿ ಪರಿವರ್ತನೆಗೆ ಗದಗ ಜಿಲ್ಲೆಯಲ್ಲಿ ಮಾದರಿಯಾಯಿತು.








## ವಿಕಸಿತ ಕೃಷಿ ಸಂಕಲ್ಪ ಅಭಿಯಾನ – ಧನ್ಯವಾದ ಕಾರ್ಯಕ್ರಮ ಹಾಗೂ ವರದಿ ಪ್ರಸ್ತುತಿ – ಕೃಷಿ ವಿಶ್ವವಿದ್ಯಾಲಯ, ಧಾರವಾಡ

2025ರ ಜೂನ್ 14ರಂದು, ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವಿಕ್ಸಿತ ಕೃಷಿ ಸಂಕಲ್ಪ ಅಭಿಯಾನ ಧನ್ಯವಾದ ಕಾರ್ಯಕ್ರಮ ಆಯೋಜಿಸಲಾಯಿತು.

ಹುಲಕೋಟಿ ಕೃಷಿ ವಿಜ್ಞಾನ ಕೇಂದ್ರದಿಂದ ಡಾ. ವಿನಾಯಕ ನಿರಂಜನ್, ವಿಷಯ ತಜ್ಞರು (ಕೃಷಿ ಇಂಜಿನಿಯರಿಂಗ್) ಹಾಗೂ ಡಾ. ಕೆ. ವಿ. ಪಾಟೀಲ, ವಿಷಯ ತಜ್ಞರು (ಕೃಷಿ ವಿಸ್ತರಣೆ) ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಕಾರ್ಯಕ್ರಮವನ್ನು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಪಿ. ಎಲ್. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ವಿಸ್ತರಣಾ ನಿರ್ದೇಶಕ ಡಾ. ಎಂ. ವಿ. ಮಂಜುನಾಥ ಅವರು ಉಪಸ್ಥಿತರಿದ್ದರು. ಧಾರವಾಡ ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಕೆವಿಕೆ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಭಾಗವಹಿಸಿದರು.



ಕಾರ್ಯಕ್ರಮದಲ್ಲಿ ಡಾ. ವಿನಾಯಕ ನಿರಂಜನ್ ಅವರು ಹುಲಕೋಟಿ ಕೆವಿಕೆ ಪರವಾಗಿ VKSA ವರದಿಯನ್ನು ಪ್ರಸ್ತುತಪಡಿಸಿ, ಮುಖ್ಯ ಚಟುವಟಿಕೆಗಳು, ಸಾಧನೆಗಳು ಹಾಗೂ ರೈತರ ತಲುಪುವಿಕೆ ಕುರಿತು ವಿವರಿಸಿದರು.

ಡಾ. ಪಿ. ಎಲ್. ಪಾಟೀಲ ಅವರು ವಿವಿಧ ಜಿಲ್ಲೆಗಳಲ್ಲಿ VKSA ಅಭಿಯಾನವನ್ನು ಸಮಗ್ರವಾಗಿ ಆಯೋಜಿಸಿ, ಯಶಸ್ವಿಯಾಗಿ ಜಾರಿಗೆ ತಂದ ಕೆವಿಕೆ ವಿಜ್ಞಾನಿಗಳ ಶ್ರಮವನ್ನು ಮೆಚ್ಚಿದರು. VKSA ಅಭಿಯಾನವು ರೈತರು, ಅಭಿವೃದ್ಧಿ ಇಲಾಖೆಗಳು ಹಾಗೂ ಕೆವಿಕೆಗಳ ನಡುವೆ ತಾಂತ್ರಿಕ ಅಂತರವನ್ನು ನಿವಾರಿಸಲು ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಡಾ. ಎಂ. ವಿ. ಮಂಜುನಾಥ ಅವರು ವಿಶ್ವವಿದ್ಯಾಲಯ ಹಾಗೂ ಐಸಿಎಆರ್‌ಗೆ ಧನ್ಯವಾದಗಳನ್ನು ಸಲ್ಲಿಸಿ, VKSA ಕಾರ್ಯಕ್ರಮದ ಮೂಲಕ ಮುಂಗಾರು ಬೆಳೆಗಳಿಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿಯನ್ನು ನೀಡುವ ಅವಕಾಶ ದೊರೆತಿರುವುದಾಗಿ ಹೇಳಿದರು.

## "ಕೋಕೋ, ಕಪ್ಪು ಮೆಣಸು ಮತ್ತು ಕಾಫಿ ಬೆಳೆ ಬೇಸಾಯ ಅವಕಾಶಗಳು" – ರೈತ–ವಿಜ್ಞಾನಿಗಳ ಸಂವಾದ ಸಭೆ

ಐ.ಸಿ.ಎ.ಆರ್ – ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಗದಗ ವತಿಯಿಂದ, "ಕೋಕೋ, ಕಪ್ಪು ಮೆಣಸು ಮತ್ತು ಕಾಫಿ ಬೆಳೆ ಬೇಸಾಯ ಅವಕಾಶಗಳು" ಎಂಬ ವಿಷಯದ ಮೇಲೆ ರೈತ–ವಿಜ್ಞಾನಿಗಳ ಸಂವಾದ ಸಭೆಯನ್ನು 2025ರ ಜೂನ್ 15ರಂದು ಕೆವಿಕೆಯಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮದ ಉದ್ದೇಶ, ಗದಗ ಜಿಲ್ಲೆಯ ಹವಾಮಾನ ಮತ್ತು ಮಣ್ಣಿನ ಸ್ಥಿತಿಗೆ ತಕ್ಕಂತೆ, ರೈತರ ಬೆಳೆ ವ್ಯವಸ್ಥೆಯನ್ನು ಉನ್ನತ ಮೌಲ್ಯದ ತೋಟಗಾರಿಕಾ ಬೆಳೆಗಳೊಂದಿಗೆ ವೈವಿಧ್ಯಗೊಳಿಸುವ ಅವಕಾಶಗಳ ಕುರಿತು ಅರಿವು ಮೂಡಿಸುವುದು.



ಈ ಸಂವಾದದಲ್ಲಿ ಫಾರ್ಮ್ ಟಿವಿ, ಬೆಂಗಳೂರು ಮುಖ್ಯ ಸಂಪಾದಕರಾದ ಡಾ. ವೆಂಕಟ್ರಮಣ ಹೆಗಡೆ ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಕೋಕೋ, ಕಪ್ಪು ಮೆಣಸು ಮತ್ತು ಕಾಫಿ ಬೆಳೆಗಳನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಬೆಳೆಸುವ ಆರ್ಥಿಕ ಹಾಗೂ ಕೃಷಿ ವೈಜ್ಞಾನಿಕ ಅಂಶಗಳ ಬಗ್ಗೆ ವಿವರಿಸಿದರು. ಈ

ಬೆಳೆಗಳನ್ನು ಬೆಳೆಯಲು ನವೀನ ಕೃಷಿ ಪದ್ಧತಿಗಳು, ಅಂತರ ಬೆಳೆ ವಿಧಾನಗಳು ಮತ್ತು ಮಾರುಕಟ್ಟೆ ಸಂಪರ್ಕಗಳ ಅವಶ್ಯಕತೆಯನ್ನು ತಿಳಿಸಿದರು ಜೊತೆಗೆ ರೈತರಿಗೆ ಹೆಚ್ಚಿನ ಲಾಭ ದೊರೆಯುವು ಎಂದು ಹೇಳಿದರು.

ತರಬೇತಿಯ ನಂತರ, ರೈತರು ವಿಜ್ಞಾನಿಗಳೊಂದಿಗೆ ನೇರ ಸಂವಾದ ಏರ್ಪಡಿಸಿ, ಮಣ್ಣಿನ ಸೂಕ್ತತತೆ, ನೀರಿನ ಅವಶ್ಯಕತೆ, ಕೀಟ–ರೋಗ ನಿರ್ವಹಣೆ ಹಾಗೂ ಮಾರುಕಟ್ಟೆ ಕುರಿತು ಪ್ರಶ್ನೆಗಳನ್ನು ಕೇಳಿದರು. ತಜ್ಞರು ಪ್ರತಿಯೊಂದು ಪ್ರಶ್ನೆಗೆ ಸಮಗ್ರ ಉತ್ತರ ನೀಡಿದರು.

ಒಟ್ಟಾರೆಯಾಗಿ ಈ ಸಂವಾದ ಸಭೆ, ಜ್ಞಾನ ವಿನಿಮಯಕ್ಕೆ ಒಂದು ಮಹತ್ವದ ವೇದಿಕೆಯಾಗಿ, ರೈತರಿಗೆ ತೋಟಗಾರಿಕಾ ಬೆಳೆಗಳಲ್ಲಿ ಹೊಸ ಅವಕಾಶಗಳನ್ನು ಅನ್ವೇಷಿಸಲು ಪ್ರೇರಣೆ ನೀಡಿತು ಮತ್ತು ದೀರ್ಘಕಾಲಿಕ ಆದಾಯ ನಿರ್ಮಾಣದ ದಾರಿಯನ್ನು ತೋರಿಸಿಕೊಟ್ಟಿತು. ಒಟ್ಟು 125 ಜನ ಪ್ರಗತಿಪರ ರೈತರು ವಿವಿಧ ಜಿಲ್ಲೆಗಳಿಂದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

## ನೈಸರ್ಗಿಕ ಕೃಷಿ ಸಭೆ

ಐ.ಸಿ.ಎ.ಆರ್. – ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಹುಲಕೋಟಿ, ಗದಗದಲ್ಲಿ 2025ರ ಜೂನ್ 23 ರಂದು ನೈಸರ್ಗಿಕ ಕೃಷಿ ಕುರಿತು ಸಭೆಯನ್ನು ಆಯೋಜಿಸಲಾಯಿತು. ಈ ಸಭೆಗೆ ಕೃಷಿ ವಿಜ್ಞಾನ ಫೌಂಡೇಶನ್‌ನ ಅಧ್ಯಕ್ಷರಾದ ಶ್ರೀ ಡಿ. ಆರ್. ಪಾಟೀಲ ಅವರು ಅಧ್ಯಕ್ಷತೆ ವಹಿಸಿದರು.



ಕಾರ್ಯಕ್ರಮದಲ್ಲಿ ಶ್ರೀಮತಿ ತಾರಾಮಣಿ ಜಿ. ಎಚ್., ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಗದಗ, ಮತ್ತು ಶ್ರೀಮತಿ ಸ್ಫೂರ್ತಿ ಜಿ. ಎಸ್., ಉಪ ನಿರ್ದೇಶಕರು, ಕೃಷಿ ಇಲಾಖೆ, ಗದಗ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ಎಲ್. ಜಿ. ಹಿರೇಗೌಡರ್, ಕೆವಿಕೆ ಸಲಹೆಗಾರರು ಹಾಗೂ ಡಾ. ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೆವಿಕೆ ಗದಗ, ಚರ್ಚೆಯಲ್ಲಿ ಪಾಲ್ಗೊಂಡರು.

ಸಭೆಯಲ್ಲಿ ಜಿಲ್ಲೆಯ ಎಲ್ಲಾ ಕೃಷಿ ಸಹಾಯಕ ನಿರ್ದೇಶಕರು (ADAs), ಕೃಷಿ ಅಧಿಕಾರಿಗಳು (AOs), ಕಾರ್ಯನಿರ್ವಾಹಕ ಅಧಿಕಾರಿಗಳು (EOs), ಕೆವಿಕೆ ಸಿಬ್ಬಂದಿ ಹಾಗೂ ಪ್ರಗತಿಪರ ರೈತರು ಭಾಗವಹಿಸಿದರು.

## ಮುಂಗಾರು ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮ

ಐಸಿಎಆರ್ – ಕೆ.ಹೆಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಗದಗ, ರಿಲಾಯನ್ಸ್ ಫೌಂಡೇಶನ್, ಗದಗ ಇವರ ಸಹಯೋಗದಲ್ಲಿ, 2025ರ ಜೂನ್ 26ರಂದು ಮುಂಗಾರು ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಒಂದು ದಿನದ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ತರಬೇತಿಯ ಉದ್ದೇಶ, ಮುಂಗಾರು ಬೆಳೆ ಪದ್ಧತಿಗಳಲ್ಲಿ ಉತ್ಪಾದಕತೆ ಮತ್ತು ಸುಸ್ಥಿರತೆಯನ್ನು ಹೆಚ್ಚಿಸಲು ವಿಜ್ಞಾನಾಧಾರಿತ ಕ್ರಮಗಳ ಬಗ್ಗೆ ರೈತರು ಮತ್ತು ವಿಸ್ತರಣಾ ಸಿಬ್ಬಂದಿಗೆ ಅರಿವು ಮೂಡಿಸುವುದು.



ತರಬೇತಿ ಅವಧಿಯಲ್ಲಿ ಶ್ರೀ ಎನ್. ಎಚ್. ಭಂಡಿ ಅವರು ಗದಗ ಜಿಲ್ಲೆಯ ಪ್ರಮುಖ ಮುಂಗಾರು ಬೆಳೆಗಳಾದ ಹೆಸರು, ಗೋವಿನ ಜೋಳ ಮತ್ತು ಈರುಳ್ಳಿ, ಮೆಣಸಿನಕಾಯಿ ಕುರಿತು ಸಮಗ್ರ ಬೆಳೆ ನಿರ್ವಹಣಾ ವಿಧಾನಗಳ ಮೇಲೆ ಮಾಹಿತಿಯನ್ನು ನೀಡಿದರು. ಅವರು ಉತ್ತಮ ಜಾತಿಗಳು, ಬೀಜ ಚಿಕಿತ್ಸೆ, ಪೋಷಕಾಂಶ ಹಾಗೂ ಕೀಟ–ರೋಗ ನಿರ್ವಹಣೆ, ಮತ್ತು ಪ್ರಾದೇಶಿಕ ಹವಾಮಾನಕ್ಕೆ ಹೊಂದುವ ನೀರು ಸಂರಕ್ಷಣಾ ತಂತ್ರಗಳ ಬಗ್ಗೆ ವಿಶೇಷವಾಗಿ ಒತ್ತು ನೀಡಿದರು.



ಶ್ರೀಮತಿ ಹೇಮಾವತಿ ಹಿರೇಗೌಡರ್ ಅವರು ಈರುಳ್ಳಿ, ಮೆಣಸಿನಕಾಯಿ ಹಾಗೂ ಬಹುವಾರ್ಷಿಕ ತೋಟಗಾರಿಕಾ ಬೆಳೆಗಳ ನಿರ್ವಹಣಾ ವಿಧಾನಗಳ ಕುರಿತು ಮಾತನಾಡಿ, ನರ್ಸರಿ ನಿರ್ವಹಣೆ, ಸಮಗ್ರ ಪೋಷಕಾಂಶ ಮತ್ತು ಕೀಟ ನಿಯಂತ್ರಣ ಹಾಗೂ ಕೊಯ್ಲಿನ ನಂತರದ ನಿರ್ವಹಣೆ ಕುರಿತ ಪ್ರಮುಖ ಅಂಶಗಳನ್ನು ಹಂಚಿಕೊಂಡರು.

ಈ ತರಬೇತಿಯಲ್ಲಿ ಗದಗ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಸುಮಾರು 70 ಮಂದಿ ಭಾಗವಹಿಸಿದರು.

## ಅಂತರರಾಷ್ಟ್ರೀಯ ಯೋಗ ದಿನ – 2025

ಐ.ಸಿ.ಎ.ಆರ್.– ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಗದಗದಲ್ಲಿ 2025ರ ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಯೋಗ ಶಿಬಿರವನ್ನು ಆಯೋಜಿಸಲಾಯಿತು. ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಯೋಗದ ಮಹತ್ವವನ್ನು ತಿಳಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



ಕಾರ್ಯಕ್ರಮವು ಯೋಗದ ದೈನಂದಿನ ಜೀವನದಲ್ಲಿನ ಅಗತ್ಯತೆ ಮತ್ತು ಲಾಭಗಳ ಕುರಿತ ಸಂಕ್ಷಿಪ್ತ ಪರಿಚಯದೊಂದಿಗೆ ಆರಂಭವಾಯಿತು. ನಂತರ, ತರಬೇತಿ ಪಡೆದ ಯೋಗ ಗುರುವರ್ಯರ ಮಾರ್ಗದರ್ಶನದಲ್ಲಿ ಪ್ರಾಯೋಗಿಕ ಯೋಗಾಭ್ಯಾಸ ನಡೆಯಿತು. ಇದರಲ್ಲಿ ಮೂಲಭೂತ ಆಸನಗಳು, ಪ್ರಾಣಾಯಾಮ (ಉಸಿರಾಟ ವಿಧಾನಗಳು) ಹಾಗೂ ಧ್ಯಾನಾಭ್ಯಾಸಗಳನ್ನು ಒಳಗೊಂಡಿತ್ತು.

ಸಮತೋಲನಯುತ ಜೀವನ ಶೈಲಿಗಾಗಿ ಯೋಗವನ್ನು ದೈನಂದಿನ ಬದುಕಿನ ಭಾಗವನ್ನಾಗಿ ಮಾಡಿಕೊಳ್ಳುವ ಅಗತ್ಯತೆಯನ್ನು ಕೆವಿಕೆ ಸಿಬ್ಬಂದಿ ಒತ್ತಿ ಹೇಳಿದರು.

ಈ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ರೈತರು, ವಿದ್ಯಾರ್ಥಿಗಳು ಹಾಗೂ ಕೇಂದ್ರದ ಸಿಬ್ಬಂದಿ ಭಾಗವಹಿಸಿದರು.

## ಕೌಶಲ್ಯ ತರಬೇತಿಗಳ ಆಯೋಜನೆ

### ಹೈನುಗಾರಿಕೆ:

ಎಸ್.ಬಿ.ಐ.–ಎ.ಎಸ್.ಎಫ್.–ಆರ್.ಸೆ.ಟಿ., ಹುಲಕೋಟಿ ಮತ್ತು ಐ.ಸಿ.ಎ.ಆರ್.– ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ,, ಹುಲಕೋಟಿ ಇವರ ಸಹಯೋಗದಲ್ಲಿ, 2025ರ ಏಪ್ರಿಲ್‌ನಿಂದ ಜೂನ್‌ವರೆಗೆ ವೈಜ್ಞಾನಿಕ ಹೈನುಗಾರಿಕೆ ಕುರಿತು 2 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ತರಬೇತಿ ಅವಧಿಯಲ್ಲಿ ತರಬೇತಿ ಪ್ರಾತ್ಯಕ್ಷಿಕೆ, ಪ್ರಾಯೋಗಿಕ ಅಭ್ಯಾಸಗಳು, ಪ್ರದರ್ಶನಗಳು, ಕ್ಷೇತ್ರ ಅಧ್ಯಯನಗಳು ಹಾಗೂ ಯಶಸ್ವಿ ಉದ್ಯಮಿಗಳ ಅನುಭವ ಹಂಚಿಕೆಗಳನ್ನು ನಡೆಸಲಾಯಿತು. ಒಟ್ಟು 52 ಯುವಕರು ಈ ತರಬೇತಿಯಲ್ಲಿ ಭಾಗವಹಿಸಿದರು.

## ಎಪ್ರಿಲ್ ರಿಂದ ಜೂನ್, 2025ರ ವರೆಗೆ ಆಯೋಜಿಸಿದ ತರಬೇತಿಗಳ ವಿವರ

| ಅ. ಸಂ. | ದಿನಾಂಕ | ವಿಷಯ | ತರಬೇತಿಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 1 | 22-04-2025 | ಮಹಿಳಾ ಸಶಕ್ತೀಕರಣ | 1 | 24 |
| 2 | 22-04-2025 & 23-06-2025 | ವೈಜ್ಞಾನಿಕ ಹೈನುಗಾರಿಕೆ | 2 | 52 |
| 3 | 22-04-2025 & 25-04-2025 | ಹಂಗಾಮು ಪೂರ್ವ ತಯಾರಿ ಅಭಿಯಾನ | 2 | 94 |
| 4 | 07-04-2025 | ಶೇಂಗಾ ಬೆಳೆ ಬೇಸಾಯದಲ್ಲಿ ಯಾಂತ್ರೀಕರಣ | 1 | 41 |
| 5 | 22-04-2025 | ಮೆಣಸಿನಕಾಯಿ ಹಾಗೂ ಈರುಳ್ಳಿ ಬೆಳೆಗಳಲ್ಲಿ ಬಿತ್ತುವ ಪೂರ್ವ ತಾಂತ್ರಿಕತೆಗಳು | 1 | 57 |
| 6 | 16-05-2025 & 19-05-2025 | ಸಿರಿಧಾನ್ಯಗಳಲ್ಲಿಯ ಪೌಷ್ಟಿಕತೆ ಹಾಗೂ ಪೌಷ್ಟಿಕ ತೋಟ | 4 | 249 |
| 7 | 16-05-2025 | ವೈಜ್ಞಾನಿಕ ಈರುಳ್ಳಿ ಬೇಸಾಯ | 1 | 69 |
| 8 | 20-05-2025 | ಒಣಬೇಸಾಯದಲ್ಲಿ ತೋಟಗಾರಿಕೆ | 1 | 90 |
| 9 | 06-05-2025 | ಮಣ್ಣು ಮತ್ತು ನೀರು ಸಂರಕ್ಷಣೆ ವಿಧಾನಗಳು ಹಾಗೂ ನೀರಾವರಿ ತಾಂತ್ರಿಕತೆಗಳು | 1 | 64 |
| 10 | 16-05-2025 | ಮುಂಗಾರು ಬೆಳೆಗಳಲ್ಲಿ ನೀರು ಸಂರಕ್ಷಣೆಯ ತಾಂತ್ರಿಕತೆಗಳು | 1 | 52 |
| 11 | 19-05-2025 | ಮುಂಗಾರು ಬೆಳೆಗಳಲ್ಲಿ ಯಾಂತ್ರೀಕರಣ | 1 | 48 |
| 12 | 20-05-2025 | ಸೂಕ್ಷ್ಮ ನೀರಾವರಿ ಪದ್ಧತಿಗಳ ಕಾರ್ಯನಿರ್ವಹಣೆ | 1 | 89 |
| 13 | 14-05-2025 | ತೋಟಗಾರಿಕೆ ಬೆಳೆಗಳಲ್ಲಿ ಸೂಕ್ಷ್ಮ ನೀರಾವರಿ ಹಾಗೂ ಫಲೀಕರಣ | 1 | 29 |
| 14 | 19-05-2025 | ಮಣ್ಣು ಮತ್ತು ನೀರು ಸಂರಕ್ಷಣೆ ಕ್ರಮಗಳು | 1 | 164 |
| 15 | 27-05-2025 | ಮುಂಗಾರು ಬೆಳೆಗಳು | 1 | 47 |
| 16 | 30-06-2025 | ಸೂಕ್ಷ್ಮ ನೀರಾವರಿ ಹಾಗೂ ಫಲೀಕರಣ | 1 | 30 |
| 17 | 22-06-2025 | ಸ್ವಗ್ರಾಮ ಮಿತ್ರರಿಗೆ ತರಬೇತಿ | 1 | 35 |

| ಅ. ಸಂ. | ದಿನಾಂಕ | ವಿಷಯ | ತರಬೇತಿಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 18 | 15-06-2025 | ಹೊಸ ವಾಣಿಜ್ಯ ಬೆಳೆಗಳಾದ ಕೊಕೊ, ಕಾಳು ಮೆಣಸು, ಕಾಫಿ ಗಳನ್ನು ಗದಗ ಜಿಲ್ಲೆಗೆ ಪರಿಚಯಿಸುವುದು | 1 | 104 |

## ತರಬೇತಿ /ಕಾರ್ಯಾಗಾರಗಳಲ್ಲಿ ಕೇಂದ್ರದ ಸಿಬ್ಬಂದಿ ಭಾಗವಹಿಸಿದ ವಿವರ

| ತರಬೇತಿ ವಿಷಯ | ಅವಧಿ (ದಿನಗಳು) | ದಿನಾಂಕ | ಆಯೋಜಿಸಿದ ಸಂಸ್ಥೆ |
|---|---|---|---|
| **ಡಾ. ಸುಧಾ ವ್ಹಿ. ಮಂಕಣಿ, ಹಿರಿಯ ವಿಜ್ಞಾನಿಗಳು & ಮುಖ್ಯಸ್ಥರು** | | | |
| ಗೋಡಂಬಿ ಸಂಸ್ಕರಣಾ ಘಟಕಕ್ಕೆ ಭೇಟಿ | 3 | 02-04-2025 ರಿಂದ 05-04-2025 | ಡಿ.ಸಿ.ಆರ್, ಪುತ್ತೂರ ಹಾಗೂ ಕೆವಿಕೆ, ಮಂಗಳೂರು |
| **ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು, ಮಣ್ಣು ವಿಜ್ಞಾನ** | | | |
| ನಿಕ್ರಾ ಕ್ರಿಯಾ ಯೋಜನೆ ಹಾಗೂ ಕಾರ್ಯ ಕಲಾಪಗಳ ಕುರಿತು ಸಭೆ | 2 | 23-05-2024 ರಿಂದ 24-05-2024 | ಮ್ಯಾನೇಜ್, ಹೈದರಾಬಾದ |
| ರಾಷ್ಟ್ರೀಯ ಮಿಶನ್ ಅಡಿ ನೈಸರ್ಗಿಕ ಕೃಷಿಯ | 4 | 17-06-2025 ರಿಂದ 20-06-2025 | ಕೃಷಿ ವಿಶ್ವ ವಿದ್ಯಾಲಯ, ಧಾರವಾಡ |
| **ಶ್ರೀಮತಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ)** | | | |
| ಗೋಡಂಬಿ ಸಂಸ್ಕರಣಾ ಘಟಕಕ್ಕೆ ಭೇಟಿ | 3 | 02-04-2025 ರಿಂದ 05-04-2025 | ಡಿ.ಸಿ.ಆರ್, ಪುತ್ತೂರ ಹಾಗೂ ಕೆವಿಕೆ, ಮಂಗಳೂರು |
| ನೈಸರ್ಗಿಕ ಕೃಷಿಯ ರಾಷ್ಟ್ರೀಯ ಮಿಶನ್ | 4 | 17-06-2025 ರಿಂದ 20-06-2025 | ಕೃಷಿ ವಿಶ್ವ ವಿದ್ಯಾಲಯ, ಧಾರವಾಡ |
| **ಡಾ. ವಿನಾಯಕ ನಿರಂಜನ್, ವಿಷಯ ತಜ್ಞರು, ಕೃಷಿ ಇಂಜನಿಯರಿಂಗ್** | | | |
| "DAESI ಅಧ್ಯಯನ ಸಾಮಗ್ರಿಗಳ ಪರಿಷ್ಕರಣೆ ಮತ್ತು ಪ್ರಶ್ನೆ ಬ್ಯಾಂಕ್ ತಯಾರಿಕೆ" ಕುರಿತು ರಾಷ್ಟ್ರೀಯ ಕಾರ್ಯಾಗಾರ. | 2 | 27-05-2025 ರಿಂದ 28-05-2025 | ಮ್ಯಾನೇಜ್, ಹೈದರಾಬಾದ |
| **ಡಾ. ಕೆ.ವಿ.ಪಾಟೀಲ, ವಿಷಯ ತಜ್ಞರು, ಕೃಷಿ ವಿಸ್ತರಣೆ** | | | |
| ಸ್ವಗ್ರಾಂ ಯೋಜನೆ | 3 | 26-04-2025 ರಿಂದ 28-04-2025 | ಎಮ್.ಜಿ.ಆರ್.ಡಿ.ಪಿ.ಆರ್ ವಿಶ್ವ ವಿದ್ಯಾಲಯ, ನಾಗಾವಿ, ಗದಗ |

## ಎಪ್ರಿಲ್, 2025 ರಿಂದ ಜೂನ್, 2025 ತ್ರೈಮಾಸಿಕದಲ್ಲಿ ಹಮ್ಮಿಕೊಂಡ ವಿವಿಧ ತಂತ್ರಜ್ಞಾನ ಪರಿಶೀಲನೆ ಮತ್ತು ಪ್ರಾತ್ಯಕ್ಷಿಕೆಗಳ ವಿವರ

| ತಂತ್ರಜ್ಞಾನ ಪರಿಶೀಲನೆ / ಪ್ರಾತ್ಯಕ್ಷಿಕೆಯ ಹೆಸರು | ಗ್ರಾಮ & ತಾಲೂಕ | ಪ್ರಾತ್ಯಕ್ಷಿಕೆಗಳ ಸಂಖ್ಯೆ | ಕ್ಷೇತ್ರ (ಹೆಕ್ಟೇರ್) |
|---|---|---|---|
| **ತಂತ್ರಜ್ಞಾನ ಪರಿಶೀಲನೆ** | | | |
| ಹೆಸರು ಬೆಳೆಯಲ್ಲ ಅಧಿಕ ಇಳುವರಿಗಾಗಿ ಸುಧಾರಿತ ತಳಿಗಳ ಪರಿಶೀಲನೆ | ಹಳ್ಳಿಗುಡಿ (ಮುಂಡರಗಿ) | 3 | 3.6 |
| ಈರುಳ್ಳಿ ಬೆಳೆಯಲ್ಲಿ ಅಧಿಕ ಉತ್ಪಾದನೆಗಾಗಿ ತಳಿಗಳ ಪರಿಶೀಲನೆ | ನಾಗಾವಿ (ಗದಗ), ಮಾಡಲಗೇರಿ (ರೋಣ) & ಆಡರಕಟ್ಟಿ (ಲಕ್ಷ್ಮೇಶ್ವರ) | 3 | 3.6 |
| **ಮುಂಚೂಣಿ ಪ್ರಾತ್ಯಕ್ಷಿಕೆಗಳು** | | | |
| ಗೋವಿನ ಜೋಳ + ತೊಗರಿ (4:2) ಬೆಳೆಯಲ್ಲಿ ಪ್ರಾತ್ಯಕ್ಷಿಕೆ | ಬೆಳಧಡಿ (ಗದಗ) | 6 | 2.4 |
| ಹೆಸರು ಬೆಳೆಯಲ್ಲಿ ಇಂಜಿನ್ ಚಾಲಿತ ವೀಡರಿನ ಪ್ರಾತ್ಯಕ್ಷಿಕೆ | ಸುಗನಹಳ್ಳಿ, ಮಾಡಲಗೇರಿ(ಶಿರಹಟ್ಟಿ), ಹಳ್ಳಿಗುಡಿ (ಮುಂಡರಗಿ) | 10 | 48 |

| ತಂತ್ರಜ್ಞಾನ ಪರಿಶೀಲನೆ / ಪ್ರಾತ್ಯಕ್ಷಿಕೆಯ ಹೆಸರು | ಗ್ರಾಮ & ತಾಲೂಕ | ಪ್ರಾತ್ಯಕ್ಷಿಕೆಗಳ ಸಂಖ್ಯೆ | ಕ್ಷೇತ್ರ (ಹೆಕ್ಟೇರ್) |
|---|---|---|---|
| ನವಣೆ ಬೆಳೆಯ ಹೆಚ್.ಎನ್.-46 ತಳಯ ಪ್ರಾತ್ಯಕ್ಷಿಕೆ | ಸುಗನಹಳ್ಳಿ (ಶಿರಹಟ್ಟಿ) & ಹಳ್ಳಿಗುಡಿ (ಮುಂಡರಗಿ) | 10 | 4.0 |
| ಸೋಯಾಬೀನ್ ಬೆಳೆಯ ಕೆ.ಡಿ.ಎಸ್-753 ತಳಯ ಪ್ರತ್ಯಕ್ಷಿಕೆ | ಆಡರಕಟ್ಟಿ (ಲಕ್ಷ್ಮೇಶ್ವರ) | 5 | 2.0 |
| ಹೆಸರು ಬೆಳೆಯಲ್ಲಿ ಡಿ.ಜಿ.ಜಿ.ವಿ-2 ತಳಯ ಪ್ರಾತ್ಯಕ್ಷಿಕೆ | ಹಳ್ಳಿಗುಡಿ (ಮುಂಡರಗಿ), ಅಕ್ಕಿಗುಂದ(ಲಕ್ಷ್ಮೇಶ್ವರ), ಸುಗನಹಳ್ಳಿ, ಮಾಡಲಗೇರಿ(ಶಿರಹಟ್ಟಿ), | 25 | 10.0 |
| ಉದ್ದು ಬೆಳೆಯಲ್ಲಿ ಎಲ್.ಬಿ.ಜಿ-791 ತಳಯ ಪ್ರಾತ್ಯಕ್ಷಿಕೆ | ಅಸುಂಡಿ (ಗದಗ) & ಸುನಗಹಳ್ಳಿ (ಶಿರಹಟ್ಟಿ) | 10 | 4.0 |
| ಬಯೋ-ಫೋರ್ಟಿಫೈಡ್ ವಿ.ಪಿ.ಎಮ್.ವಿ-9 ಸಜ್ಜೆ ಬೆಳೆಯಲ್ಲಿ ಮೌಲ್ಯವರ್ಧನೆಯ ಪ್ರಾತ್ಯಕ್ಷಿಕೆ | ಸುಗನಹಳ್ಳಿ (ಶಿರಹಟ್ಟಿ) & ಮಾಡಲಗೇರಿ(ಶಿರಹಟ್ಟಿ) | 5 | 1.0 |
| **ನಿಕ್ರಾ ಯೋಜನೆಯ ಮುಂಚೂಣಿ ಪ್ರಾತ್ಯಕ್ಷಿಕೆಗಳು ಹಾಗೂ ನಿಕ್ರಾ –ಎಸ್.ಸಿ.ಎಸ್.ಪಿ ಯೋಜನೆ** | | | |
| ಹೆಸರು ಬೆಳೆಯಲ್ಲಿ ಡಿ.ಜಿ.ಜಿ.ವಿ-2 ತಳಯ ಪ್ರಾತ್ಯಕ್ಷಿಕೆ | ಶಿಂಗಟರಾಯನಕೇರಿ (ಮುಂಡರಗಿ) | 30 | 12.0 |
| ಗೋವಿನ ಜೋಳ + ತೊಗರಿ (4:2) ಬೆಳೆಯಲ್ಲಿ ಪ್ರಾತ್ಯಕ್ಷಿಕೆ | ಶಿಂಗಟರಾಯನಕೇರಿ (ಮುಂಡರಗಿ) | 30 | 12.0 |
| ನವಣೆ ಬೆಳೆಯ ಹೆಚ್.ಎನ್.-46 ತಳಯ ಪ್ರಾತ್ಯಕ್ಷಿಕೆ | ಶಿಂಗಟರಾಯನಕೇರಿ (ಮುಂಡರಗಿ) & ಬೆಳಧಡಿ (ಗದಗ) | 10 | 4.0 |
| ಸಜ್ಜೆ ಬೆಳೆಯ ಹೆಚ್.ಎನ್.-46 ತಳಯ ಪ್ರಾತ್ಯಕ್ಷಿಕೆ | ಶಿಂಗಟರಾಯನಕೇರಿ (ಮುಂಡರಗಿ) & ಬೆಳಧಡಿ (ಗದಗ) | 10 | 4.0 |
| **ಎಸ್.ಸಿ.ಎಸ್.ಪಿ ಯೋಜನೆ** | | | |
| ಹೆಸರು ಬೆಳೆಯಲ್ಲಿ ಡಿ.ಜಿ.ಜಿ.ವಿ-2 ತಳಯ ಪ್ರಾತ್ಯಕ್ಷಿಕೆ | ನಾಗಾವಿ, ನಾಗಾವಿ ತಾಂಡ & ಬೆಳಧಡಿ ತಾಂಡ (ಗದಗ) | 10 | 4.0 |
| ನವಣೆ ಬೆಳೆಯ ಹೆಚ್.ಎನ್.-46 ತಳಯ ಪ್ರಾತ್ಯಕ್ಷಿಕೆ | ನಾಗಾವಿ, ನಾಗಾವಿ ತಾಂಡ & ಬೆಳಧಡಿ ತಾಂಡ (ಗದಗ) | 10 | 4.0 |
| ತೊಗರಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ನಾಗಾವಿ, ನಾಗಾವಿ ತಾಂಡ & ಬೆಳಧಡಿ ತಾಂಡ (ಗದಗ) | 10 | 4.0 |
| ಉದ್ದು ಬೆಳೆಯಲ್ಲಿ ಎಲ್.ಬಿ.ಜಿ-791 ತಳಯ ಪ್ರಾತ್ಯಕ್ಷಿಕೆ | ನಾಗಾವಿ, ನಾಗಾವಿ ತಾಂಡ & ಬೆಳಧಡಿ ತಾಂಡ (ಗದಗ) | 6 | 2.4 |
| ಗೋವಿನ ಜೋಳ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ನಾಗಾವಿ, ನಾಗಾವಿ ತಾಂಡ & ಬೆಳಧಡಿ ತಾಂಡ (ಗದಗ) | 30 | 12.0 |

## ರೈತರ ಕ್ಷೇತ್ರಗಳಿಗೆ ಭೇಟಿ

### ತಂತ್ರಜ್ಞಾನ ಪರಿಶೀಲನೆ – ಹೆಸರು ಬೆಳೆ





### ಮುಂಚೂಣಿ ಪ್ರಾತ್ಯಕ್ಷಿಕೆ– ಹೆಸರು ಬೆಳೆ






**ಪ್ರಧಾನ ಸಂಪಾದಕರು:**

ಡಾ॥ ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

**ಸಂಪಾದಕರು:**

ಡಾ॥ ಕಲ್ಲನಗೌಡ ವಿ. ಪಾಟೀಲ, ವಿಷಯ ತಜ್ಞರು (ಕೃಷಿ ವಿಸ್ತರಣ)

**ಕಾರ್ಯಕ್ರಮಗಳ ಸಂಯೋಜಕರು:**

ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)
ಡಾ॥ ವಿನಾಯಕ ಎಚ್. ನಿರಂಜನ, ವಿಷಯ ತಜ್ಞರು (ಅಗ್ರಿ ಇಂಜಿನಿಯರಿಂಗ)
ಡಾ॥ ಪ್ರವೀಣ ಕರಿಕಟ್ಟಿ, ಕಾರ್ಯಕ್ರಮ ಸಹಾಯಕರು (ಲ್ಯಾಬ್ಸ್)
ಶ್ರೀಮತಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ)
ಡಾ॥ ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು, (ಪಶು ಸಂಗೋಪನೆ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ

**ವಿನ್ಯಾಸ ಹಾಗೂ ಅಕ್ಷರ ಜೋಡಣೆ:**

ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕಯಂತ್ರ)
ಶ್ರೀ ಟಿ.ಕೆ.ಸಾಯಿ ಸ್ವರೂಪ ರಾವ್, ಸ್ಟೆನೋಗ್ರಾಫರ್

**ಸಹಾಯ:**

ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

**ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಸುಧಾ ವಿ. ಮಂಕಣಿ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ–582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ**
**ಫೋನ್: (08372)289325, ಇ–ಅಂಚೆ kvkGadag@icar.gov.in, kvkhulkoti@gmail.com, ಅಂತರ್ ಜಾಲ: https://kvkgadag.icar.gov.in**